

ನೆಲದಲ್ಲಿ ಹುಗಿದಾಗಲೂ ಕಡೇಪಕ್ಷ ಅಂವ ಭೂಮಿ ಮೇಲಿದ್ದ. ನನ್ನನ್ನ ನಡುನೀರಲ್ಲಿಟ್ಟು ಪರೀಕ್ಷೆ ಮಾಡ್ತಾ ಇದ್ದೇನೋ?'' ಎಂದು ದೇವರಿಗೆ ಕೇಳುವಷ್ಟು ದೊಡ್ಡದಾಗಿ ಕೂಗಿದ. ನಾವೂ ಮೇಲೆ ನೋಡಿದೆವು. ಏನೂ ಕಾಣಿಸಲಿಲ್ಲ.

ಇಷ್ಟರ ನಡುವೆ ಒಂದು ಪವಾಡ ಸದೃಶ ಘಟನೆ ನಡೆಯಿತು. ನಮ್ಮ ಹಿಂದಿನಿಂದ ಒಂದು ಪಾತಿದೋಣಿ ನಮ್ಮನ್ನು ಬೆನ್ನಟ್ಟಿ ಬಂದಂತೆ ಕಂಡಿತು. ಇಷ್ಟು ಹೊತ್ತೂ ನಮ್ಮನ್ನು ಬಿಟ್ಟು ನದಿಯಲ್ಲಿ ಇನ್ನೊಂದು ದೋಣಿಯೂ ಇಲ್ಲ, ನರಪಿಳ್ಳೆಯೂ ಇಲ್ಲ ಎಂದು ತಿಳಿದಿದ್ದೆವು. ಈ ದೋಣಿ ಅದೆಲ್ಲಿಂದ ಬಂದಿತೋ! ನೋಡನೋಡುತ್ತಿದ್ದಂತೆ ಅಂಬಿಗರ ಹುಡುಗ ವೆಂಕಟ ಒಮ್ಮೆಲೇ ಆ ದೋಣಿಯಿಂದ ನದಿಗೆ ಹಾರಿ ನಮ್ಮ ದೋಣಿಯನ್ನು ಹಿಡಿದ. ಆಗಲಂತೂ ''ಸತ್ತೆವಪ್ಪಾ'' ಎಂದು ಕೂಗಿದೆವು. ಇಲ್ಲ, ಸಾಯಲಿಲ್ಲ, ವೆಂಕಟ ಕೇಶಪ್ಪಚ್ಚಿಯ ಕೈಯಿಂದ ಹುಟ್ಟು ಕಸಿದು ದೋಣಿಯನ್ನು ತನ್ನ ವಶಕ್ಕೆ ತಂದುಕೊಂಡ. ದೋಣಿಯನ್ನು ನಿಯಂತ್ರಣಕ್ಕೆ ತಂದುಕೊಳ್ಳುವುದು ಅಷ್ಟು ಸುಲಭವಾಗಲಿಲ್ಲ. ಆದರೆ, ಹಿಂದಿನ ದೋಣಿಯಲ್ಲಿ ವೆಂಕಟನ ಅಪ್ಪ ಮಾದೇವ ಮಗನಿಗೆ ಸೂಚನೆ ಕೊಡುತ್ತಲೇ ಇದ್ದ. ಮಾದೇವಣ್ಣ ಆ ದೋಣಿಯಿಂದ ನಮ್ಮ ದೋಣಿಯನ್ನು ಅಂಕೆಗೆ ತೆಗೆದುಕೊಳ್ಳುತ್ತಲೇ ನಮ್ಮನ್ನು ಬೈಯುತ್ತಲೂ ಇದ್ದ. ''ನದಿಲಿ ಮಸ್ಕರಿ ಮಾಡೂಕೆ ಬರ್ತ್ರಿ ಅಲಾ...'' ಎಂದು ಅವನು ಕೂಗಾಡುತ್ತಿದ್ದುದು ಮುಂದೆ ನಾವು ಎದುರಿಸಲಿರುವ ಪೂಜೆಯ ಪೂರ್ವ ಭಾಗ ಅಷ್ಟೇ. ಕೇಶಪ್ಪಚ್ಚಿ ಅಕ್ಷರಶಃ ನಡುಗುತ್ತಿದ್ದ. ಸ್ವಲ್ಪ ಹೊತ್ತು ಕಳೆದ ಮೇಲೆ ಏನೂ ಆಗಲಿಲ್ಲ ಎಂಬಂತೆ ನಗತೊಡಗಿದ.